# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.10.2011**

## ***ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರ ಮನೆ ಎದುರುಗಡೆ ತಮಟೆ ಬಾರಿಸುವ ಕಾರ್ಯಕ್ರಮ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಆಸ್ತಿ ತೆರಿಗೆ ಬಾಕಿ ಇರುವ ತೆರಿಗೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ವಸೂಲಿ ಮಾಡಲು ಕಾರ್ಯಕ್ರಮಗಳನ್ನು ರೂಪಿಸಿ ಅಗತ್ಯವಿದ್ದಲ್ಲಿ ಜಪ್ತಿ ವಾರಂಟ್‌ಗಳನ್ನು ಜಾರಿ ಮಾಡಿ ತೆರಿಗೆ ವಸೂಲಿ ಮಾಡಲು ವಲಯ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರುಗಳಿಗೆ ಆದೇಶಿಸಿರುತ್ತಾರೆ.

ದಿನಾಂಕ: 01.10.2011 ರಂದು ತಮಟೆ ಹೊಡೆಯುವ ಕಾರ್ಯಕ್ರಮವನ್ನು ಮುಂದುವರೆಸಿ, ರಾಜರಾಜೇಶ್ವರಿನಗರ ವಲಯದ ಯಶವಂತಪುರ ಉಪ ವಿಭಾಗದಲ್ಲಿ ಕಂದಾಯ ಅಧಿಕಾರಿ (ರಾಜರಾಜೇಶ್ವರಿನಗರ) ವಲಯ ಹಾಗೂ ಸಹಾಯಕ ಕಂದಾಯ ಅಧಿಕಾರಿ (ಯಶವಂತಪುರ) ವಲಯ ರವರ ನೇತೃತ್ವದಲ್ಲಿ ಆಸ್ತಿ ತೆರಿಗೆ ಬಾಕಿ ಇರುವ ಸ್ವತ್ತುಗಳ ಮುಂದೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಹೆಚ್.ಎಂ.ಟಿ. ಮೆಷಿನ್ ಟೂಲ್ಸ್ ರವರು ಒಟ್ಟು ರೂ.18,56,52,329/- ತೆರಿಗೆ ಬಾಕಿ ಇದ್ದು, ವಾರೆಂಟ್ ಜಾರಿ ಮಾಡಲಾಗಿರುತ್ತದೆ. ಈ ಸಂಬಂಧ ಸದರಿಯವರು ನ್ಯಾಯಾಲಯದಲ್ಲಿ ದಾವೆ ಹೂಡಿ, ಒಂದು ತಿಂಗಳ ತಡೆಯಾಜ್ಞೆ ತಂದಿರುತ್ತಾರೆ. ಮತ್ತೆ ಒಂದು ತಿಂಗಳ ನಂತರ ಕಾರ್ಯಾಚರಣೆ ಮುಂದುವರೆಸಲಾಗುವುದು.

ತದನಂತರ ಇನ್ನೂ 7 ಸ್ಥಳಗಳಲ್ಲಿ ರೂ.29,28,493/- ಅಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ವಿವಿಧ ಸ್ವತ್ತುಗಳ ಮುಂದೆ ತಮಟೆ ಹೊಡೆಯುವ ಕಾರ್ಯಕ್ರಮ ಮುಂದುವರೆಸಿ, ಸ್ಥಳದಲ್ಲೇ ರೂ.3,25,015/- ರೂ.ಗಳ ಚೆಕ್‌ಗಳನ್ನು ಆಸ್ತಿ ಮಾಲೀಕರು ಪಾವತಿಸಿರುತ್ತಾರೆ. ಹಾಗೂ 4 ಆಸ್ತಿಗಳ ಮಾಲೀಕರು ದಿನಾಂಕ: 03.10.2011 ರಂದು ಪಾವತಿಸುವುದಾಗಿ ತಿಳಿಸಿರುತ್ತಾರೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿಸಲು ಆಸ್ತಿ ಮಾಲೀಕರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೂ ಕೆಲವರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ. ಅಂತಹವರ ವಿರುದ್ಧ ಜಪ್ತಿ ವಾರಂಟ್ ಜಾರಿ ಮಾಡುವುದರ ಜೊತೆಗೆ ಅವರ ಮನೆ ಎದುರು ತಮಟೆ ಹೊಡೆಯುವ ಕಾರ್ಯ ಮುಂದುವರೆಸಲಾಗುವುದೆಂದು ಆಯುಕ್ತರು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.10.2011**

## ***ಪಾದಚಾರಿ ಮಾರ್ಗ ಒತ್ತುವರಿ ತೆರವು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ದಿನಾಂಕ: 01.10.2011 ರಂದು ಪದ್ಮನಾಭನಗರ ವಿಭಾಗದ ಬನಶಂಕರಿ ಉಪ ವಿಭಾಗದ ವಾರ್ಡ್ ನಂ.167 ಮತ್ತು 180 ರಲ್ಲಿ ಬರುವ ಯಡಿಯೂರು ರಸ್ತೆ ಹಾಗೂ ಸುಬ್ರಮಣ್ಯಪುರಂ ರಸ್ತೆಗಳ ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿರುವುದನ್ನು ತೆರವುಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸದರಿ ಕಾರ್ಯಕ್ರಮವನ್ನು ಸ್ಥಳೀಯ ಪೊಲೀಸ್ ಹಾಗೂ ಈ ಉಪ ವಿಭಾಗದ ಸಹಾಯಕ ಅಭಿಯಂತರರುಗಳೊಂದಿಗೆ ತೆರವುಗೊಳಿಸಲಾಗಿರುತ್ತದೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬನಶಂಕರಿ) ಉಪ ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.10.2011**

## ***ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರ ಮನೆ ಎದುರುಗಡೆ ತಮಟೆ ಬಾರಿಸುವ ಕಾರ್ಯಕ್ರಮ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಆಸ್ತಿ ತೆರಿಗೆ ಬಾಕಿ ಇರುವ ತೆರಿಗೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ವಸೂಲಿ ಮಾಡಲು ಕಾರ್ಯಕ್ರಮಗಳನ್ನು ರೂಪಿಸಿ ಅಗತ್ಯವಿದ್ದಲ್ಲಿ ಜಪ್ತಿ ವಾರಂಟ್‌ಗಳನ್ನು ಜಾರಿ ಮಾಡಿ ತೆರಿಗೆ ವಸೂಲಿ ಮಾಡಲು ವಲಯ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರುಗಳಿಗೆ ಆದೇಶಿಸಿರುತ್ತಾರೆ.

ಇಂದು ತಮಟೆ ಹೊಡೆಯುವ ಕಾರ್ಯಕ್ರಮವನ್ನು ಮುಂದುವರೆಸಿ, ದಾಸರಹಳ್ಳಿ ವಲಯದ ಸಹ ಕಂದಾಯ ಅಧಿಕಾರಿ (ಪೀಣ್ಯಾ ಕೈಗಾರಿಕಾ ಪ್ರದೇಶ) ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.39 ಮತ್ತು 41 ರಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿದ್ದ ಇಂಡಸ್‌ಪಿಲಾ, ಪ್ಲಾಟ್ ನಂ.21/ಬಿ/-3 ರವರು ರೂ.22,47,108/- ರೂ.ಗಳು ಮತ್ತು ನಾಗಸನ್ ಅಂಡ್ ಕಂಪನಿ, ನಂ.30/ಸಿ, 2ನೇ ಹಂತ ರವರು ರೂ.18,72,229/- ರೂ.ಗಳು ಹಾಗೂ ಎನ್.ಟಿ.ಟಿ.ಎಫ್. ನಂ.23 ಮತ್ತು 24, 2ನೇ ಹಂತ ರವರು 6,82,035/- ರೂ.ಗಳಷ್ಟು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದರಿಂದ ದಿನಾಂಕ: 03.10.2011 ರಂದು ಸಹ ಕಂದಾಯ ಅಧಿಕಾರಿ (ಪೀಣ್ಯಾ ಕೈಗಾರಿಕಾ ಪ್ರದೇಶ) ರವರು ಪಾಲಿಕೆ ಸಿಬ್ಬಂದಿಯ ಸಹಯೋಗದೊಂದಿಗೆ ಕಟ್ಟಡದ ಎದುರುಗಡೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಂಡು, ಮೇಲ್ಕಂಡ 3 ಸಂಸ್ಥೆಗಳ ಆಸ್ತಿ ಮಾಲೀಕರಿಂದ ಬಾಕಿ ಒಟ್ಟು ಮೊತ್ತ ರೂ.48,01,372/- ರೂ.ಗಳ ಚೆಕ್‌ಗಳನ್ನು ವಸೂಲಿ ಮಾಡಿರುತ್ತಾರೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿಸಲು ಆಸ್ತಿ ಮಾಲೀಕರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೂ ಕೆಲವರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ. ಅಂತಹವರ ವಿರುದ್ಧ ಜಪ್ತಿ ವಾರಂಟ್ ಜಾರಿ ಮಾಡುವುದರ ಜೊತೆಗೆ ಅವರ ಮನೆ ಎದುರು ತಮಟೆ ಹೊಡೆಯುವ ಕಾರ್ಯ ಮುಂದುವರೆಸಲಾಗುವುದೆಂದು ಆಯುಕ್ತರು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.10.2011**

ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿರುವ ಇಸ್ಕಾನ್ ದೇವಸ್ಥಾನದ ಆವರಣದಲ್ಲಿ ಕಲ್ಯಾಣ ಮಂಟಪ, ಉನ್ನತ ಶ್ರೇಣಿಯ 3 ಹೋಟೆಲ್‌ಗಳು ಮತ್ತು ವಸತಿಗೃಹಗಳನ್ನು ನಿರ್ಮಿಸಿ, ವಾಣಿಜ್ಯ ಉದ್ದೇಶಕ್ಕಾಗಿ ಬಳಸುತ್ತಿರುವುದರಿಂದ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸಲು ಮತ್ತು ಉದ್ದಿಮೆ ಪರವಾನಿಗೆಯನ್ನು ಪಡೆಯಲು ನೋಟಿಸ್ ಜಾರಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಂದಾಯ ಅಧಿಕಾರಿಗಳು ಮೌಲ್ಯಮಾಪನ ಮಾಡಿ, 80 ಲಕ್ಷ ರೂ.ಗಳ ಆಸ್ತಿ ತೆರಿಗೆಯನ್ನು ಪಾವತಿಸಲು ನೋಟಿಸ್ ಜಾರಿ ಮಾಡಿದ್ದರು. ಈಗ ಇಸ್ಕಾನ್ ಸಂಸ್ಥೆಯವರು ಆಸ್ತಿ ತೆರಿಗೆಯನ್ನು ಪಾವತಿಸಲು ಒಪ್ಪಿಕೊಂಡಿರುವುದಾಗಿ ತಿಳಿಸಿದ್ದಾರೆಂದು ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ತಿಳಿಸಿರುತ್ತಾರೆ. ಈ ಆಸ್ತಿಯನ್ನು ಮರು ಮೌಲ್ಯಮಾಪನ ಮಾಡಿದರೆ ಇನ್ನೂ ಹೆಚ್ಚಿನ ಆಸ್ತಿ ತೆರಿಗೆ ಪಾವತಿಸಬೇಕಾಗಬಹುದೆಂದು ಅನುಮಾನ ವ್ಯಕ್ತಪಡಿಸಿ, ಆಯುಕ್ತರೊಂದಿಗೆ ಚರ್ಚಿಸಿದರು. ಪಾಲಿಕೆಯ ಆಯುಕ್ತರು ಕೂಡಲೇ ಪಶ್ಚಿಮ ವಲಯದ ಉಪ ಆಯುಕ್ತರಿಗೆ ಆದೇಶ ನೀಡಿ, ಖುದ್ದಾಗಿ ಮರು ಮೌಲ್ಯಮಾಪನ ಮಾಡಲು ಆದೇಶಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**